**ವಿಶೇಷ ಮೊಕದ್ದಮೆ ಸಂಖ್ಯೆಃ 133/2016**

**ಪಿ.ಡಬ್ಲ್ಯೂಃ6 (ಸಿಡಬ್ಲ್ಯೂಃ 15 )**

**ಸಾಕ್ಷಿಯನ್ನು ದಿನಾಂಕ 08.01.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

3. ದಿಃ12.1.2015 ರಂದು ಎಸ್.ಡಿ.ಎ., ಶಂಕರಮೂರ್ತಿ ರವರು ಮಃ3.30 ಗಂಟೆಗೆ ಲೆಕ್ಕ ಪರಿಶೋಧಕರ ಕೋಣೆಗೆ ನನ್ನನ್ನು ಕರೆಸಿದ್ದಾರೆ. ನಾನು ಅಲ್ಲಿಗೆ ಹೋದಾಗ ಪಂಚರನ್ನು ಮತ್ತು ಸಿಬ್ಬಂದಿಯನ್ನು ನನಗೆ ಪರಿಚಯ ಮಾಡಿಸಿದರು. ಸ್ಥಳದಲ್ಲಿ ಕಚೇರಿಯ ವ್ಯವಸ್ಥಾಪಕ ಯರಿಸ್ವಾಮಿ , ವಿದ್ಯಾಶಂಕರ್ ಹೆಚ್ ವೀರಾಪುರ ಗ್ರಾಮ ಪಂಚಾಯ್ತಿ ಸೆಕ್ರೇಟರಿ ಮತ್ತು ಪಿ.ಡಿ.ಒ., ಸುಮಲತ ರವರು ಇದ್ದರು.

4. ಲೋಕಾಯುಕ್ತ ಇನ್ಸಪೆಕ್ಟರ್ ರವರು ನನಗೆ ನಿಮ್ಮ ಕಚೇರಿಯ ಕಾರ್ಯದರ್ಶಿ ಈಶ್ವರಯ್ಯ ರವರು ಲಿಂಗಣ್ಣ ರವರಿಂದ ಆಸ್ತಿ ಖಾತ ಬದಲಾವಣೆ ಮಾಡುವುದಕ್ಕಾಗಿ ಲಂಚವನ್ನು ತೆಗೆದುಕೊಂಡಿದ್ದಾರೆ ಎಂದು ತಿಳಿಸಿದ್ದಾರೆ ಮತ್ತು ಪಂಚನಾಮೆ ಮಾಡಲು ನನ್ನ ಸಹಕಾರ ಕೋರಿದ್ದಾರೆ. ನಂತರ 2 ಪಿಂಗಾಣಿ ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರು ಮಾಡಿ 1 ನೇ ಆರೋಪಿ ಈಶ್ವರಯ್ಯ ರವರ ಎಡ ಕೈ ಮತ್ತು ಬಲ ಕೈಯನ್ನು ಪಂಚರ ಸಮಕ್ಷಮದಲ್ಲಿ ಪಿಂಗಾಣಿ ಬಟ್ಟಲಿನಲ್ಲಿರುವ ದ್ರಾವಣಕ್ಕೆ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಬಾಟಲಿಯಲ್ಲಿ ಹಾಕಿ ಪಂಚನಾಮೆ ಬರೆದಿದ್ದಾರೆ.

5. ಇನ್ಸಪೆಕ್ಟರ್ ರವರು ಆರೋಪಿ ಈಶ್ವರಯ್ಯ ರವರನ್ನು ಫಿರ್ಯಾದಿದಾರರು ಕೊಟ್ಟ ರೂ.2000/-ಲಂಚದ ಹಣವನ್ನು ಎಲ್ಲಿ ಇಟ್ಟಿದ್ದೀಯಾ ಎಂದು ಕೇಳಲಾಗಿ ಆರೋಪಿಯು ತನ್ನ ಶರ್ಟ್ ನ ಎಡ ಜೇಬಿನಲ್ಲಿ ಹಣವನ್ನು ಇಟ್ಟಿರುವುದಾಗಿ ಹೇಳಿದನು. ಇನ್ಸಪೆಕ್ಟರ್ ರವರು ಪಂಚನಿಗೆ ಆರೋಪಿಯ ಜೇಬಿನಿಂದ ಹಣವನ್ನು ತೆಗೆದುಕೊಡುವಂತೆ ಹೇಳಿದರು. ಅದರಂತೆ ಪಂಚನು ಆರೋಪಿಯ ಜೇಬಿನಿಂದ ಹಣವನ್ನು ತೆಗೆದು ಎಣಿಕೆ ಮಾಡಿದಾಗ 500 ರೂಪಾಯಿ ಮುಖಬೆಲೆಯ 4 ನೋಟುಗಳು ಇದ್ದವು. ಸದರಿ ನೋಟಿನಲ್ಲಿರುವ ನಂಬರ್ ನ್ನು ಗುರುತು ಮಾಡಿಕೊಂಡು ನಂತರ ಸದರಿ ನೋಟುಗಳನ್ನು ಒಂದು ಕವರ್ ನಲ್ಲಿ ಹಾಕಿ ಸೀಲ್ ಮಾಡಿದರು. ಆರೋಪಿಗೆ ಬದಲಿ ಶರ್ಟ್ ನ್ನು ಒದಗಿಸಿ ಆರೋಪಿ ಧರಿಸಿದ್ದ ಶರ್ಟ್ ನ್ನು ವಶಪಡಿಸಿಕೊಂಡು ಸದರಿ ಶರ್ಟ್‌ನ ನೋಟುಗಳನ್ನು ಇಟ್ಟುಕೊಂಡ ಜಾಗವನ್ನು ತೊಳೆದು ದ್ರಾವಣಕ್ಕೆ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಇನ್ಸಪೆಕ್ಟರ್ ರವರು 1 ನೇ ಆರೋಪಿಯನ್ನು ದಸ್ತಗಿರಿ ಕ್ರಮ ಜರುಗಿಸಿ ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ. ಟ್ರಾಪ್ ಪಂಚನಾಮೆಯನ್ನು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ.45 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.45(ಬಿ )** ಎಂದು ಗುರುತಿಸಲಾಯಿತು. 1 ನೇ ಆರೋಪಿಯ ಬಲ ಕೈ ಮತ್ತು ಎಡ ಕೈ ತೊಳೆದ ದ್ರಾವಣವನ್ನು ಗುರುತಿಸುತ್ತೇನೆ. ಬಣ್ಣ ರಹಿತ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಎಂಒ 3 ಎಂದು ಈಗಾಗಲೆ ಗುರುತಿಸಲಾಗಿದೆ. ಆರೋಪಿಯ ಬಲ ಕೈ ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಎಂಒ 4 ಎಂದು ಗುರುತಿಸಲಾಗಿದೆ. ಆರೋಪಿಯ ಎಡ ಕೈ ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಎಂಒ 5 ಎಂದು ಗುರುತಿಸಲಾಗಿದೆ. ( ಎಂಒ 3 ಮತ್ತು 4 ದ್ರಾವಣವು ಬಣ್ಣ ರಹಿತವಾಗಿದ್ದು ಅಭಿಯೋಜಕರು ದ್ರಾವಣವನ್ನು ಜಪ್ತುಮಾಡಿಕೊಂಡು ಬಹಳ ವರ್ಷ ಆದ ಕಾರಣ ಎಂಒ 3 ಮತ್ತು 4 ರಲ್ಲಿ ಬಣ್ಣ

ಕಂಡು ಬರುತ್ತಿಲ್ಲ ಎಂದು ನುಡಿದಿರುತ್ತಾರೆ.) ಆರೋಪಿಯ ಶರ್ಟ್ ಪ್ಯಾಕೆಟ್ ನ್ನು ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿದ್ದು ಸದರಿ ದ್ರಾವಣವನ್ನು ಗುರುತಿಸುತ್ತೇನೆ. ಸದರಿ ದ್ರಾವಣವನ್ನು ಎಂಒ 6 ಎಂದು ಗುರುತಿಸಲಾಗಿದೆ. (ಎಂಒ 6 ದ್ರಾವಣವು ಗುಲಾಬಿ ಬಣ್ಣದಿಂದ ಕೂಡಿರುತ್ತದೆ.)

6. ನಿಪಿ.45 ಪಂಚನಾಮೆ ಬರೆದ ನಂತರ ಪಂಚರು , ಸಿಬ್ಬಂದಿಗಳು ಕೂಡಿಕೊಂಡು ಗ್ರಾಮ ಪಂಚಾಯ್ತಿ ಅಲುಕುಂದಿಗೆ ಹೋಗಿದ್ದೇವೆ. ಗ್ರಾಮ ಪಂಚಾಯ್ತಿ ಸಿಬ್ಬಂದಿ ಕುಳಿತುಕೊಳ್ಳುವ ಸ್ಥಳದಲ್ಲಿ ಮಹಜರು ಮಾಡಿದ್ದೇವೆ. ಫಿರ್ಯಾದಿದಾರರು ಖಾತ ಬದಲಾವಣೆಗೆ ಸಲ್ಲಿಸಿದ ಅರ್ಜಿ ಮತ್ತು ಅದಕ್ಕೆ ಸಂಬಂಧಿಸಿದ ಕಡತ , ಗ್ರಾಮ ಪಂಚಾಯ್ತಿ ನಡುವಳಿಕೆಗಳು ಮತ್ತು ಇತರ ದಾಖಲೆ ಅಂದರೆ 6 ದಾಖಲೆಗಳ ದೃಢೀಕೃತ ಪ್ರತಿಯನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ದಾಖಲೆಗಳಿಗೆ ನಾನು ಸಹಿ ಮಾಡಿದ್ದೇನೆ. ಅವುಗಳನ್ನು ನಿಪಿ.46 ರಿಂದ 51 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **46 ಎ ರಿಂದ 51 ಎ** ಎಂದು ಗುರುತಿಸಲಾಯಿತು. ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ.51 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.51(ಬಿ)** ಎಂದು ಗುರುತಿಸಲಾಯಿತು.

7. ಖಾತ ಬದಲಾವಣೆ ಮಾಡಲು ಆದ ಸರ್ಕಾರದ ಆದೇಶ ಮತ್ತು ಅದಕ್ಕೆ ಸಂಬಂಧಿಸಿದ ನಡವಳಿಕೆಗಳ ಬಗ್ಗೆ ಮಾಹಿತಿ ಕೇಳಿದ್ದು, ಸದರಿ ದಾಖಲೆಗಳ ಹಸ್ತ ಪ್ರತಿಯನ್ನು ದೃಢೀಕರಿಸಿ ತೆಗೆದುಕೊಳ್ಳಲಾಯಿತು. 1 ನೇ ಆರೋಪಿ ಈಶ್ವರಯ್ಯ ರವರ ಸೇವಾ ವಿವರದ ದೃಢೀಕೃತ ಪ್ರತಿಗಳನ್ನು ತೆಗೆದುಕೊಳ್ಳಲಾಯಿತು. 1 ನೇ ಆರೋಪಿಗೆ ಸಂಬಂಧಿಸಿದ ದಾಖಲೆಗಳನ್ನು **ನಿಪಿ.70** ಎಂದು ಗುರುತಿಸಲಾಯಿತು. ಸದರಿ ದೃಢೀಕೃತ ಪ್ರತಿಗಳಿಗೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿಯ ಸಹಿಯನ್ನು ನಿಪಿ.70 ಎ ಎಂದು ಗುರುತಿಸಲಾಯಿತು. 2 ನೇ

ಆರೋಪಿ ಸುಮಲತಾ ರವರ ಸೇವಾ ವಿವರದ ದೃಢೀಕೃತ ಪ್ರತಿಗಳನ್ನು ತೆಗೆದುಕೊಳ್ಳಲಾಯಿತು. 2 ನೇ ಆರೋಪಿ ಸುಮಲತಾ ರವರಿಗೆ ಸಂಬಂಧಿಸಿದ ದಾಖಲೆಗಳನ್ನು **ನಿಪಿ.71** ಎಂದು ಗುರುತಿಸಲಾಯಿತು. ಸದರಿ ದೃಢೀಕೃತ ಪ್ರತಿಗಳಿಗೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿಯ ಸಹಿಯನ್ನು **ನಿಪಿ.71 ಎ** ಎಂದು ಗುರುತಿಸಲಾಯಿತು.

8. ಲೋಕಾಯುಕ್ತ ಇನ್ಸಪೆಕ್ಟರ್ ರವರು ತಾಲೂಕು ಪಂಚಾಯ್ತಿ ಕಚೇರಿಯಲ್ಲಿ ಆಸ್ತಿ ಮತ್ತು ಮನೆಗಳ ಖಾತ ಬದಲಾವಣೆ ಮಾಡಲು ಅನುಸರಿಸಬೇಕಾದ ನಿಯಮಗಳು ಏನು ಎಂದು ಕೇಳಿದ್ದು ಅದರಂತೆ ತಾಲೂಕು ಪಂಚಾಯ್ತಿ ಕಚೇರಿಯಿಂದ ನಾನು ದಾಖಲೆಗಳನ್ನು ಒದಗಿಸಿರುತ್ತೇನೆ. ಸದರಿ ದಾಖಲೆಗಳನ್ನು **ನಿಪಿ.72** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.72 ಎ** ಎಂದು ಗುರುತಿಸಲಾಯಿತು. ಸರ್ಕಾರದ ನಿಯಮ ಮತ್ತು ಆದೇಶಗಳ ದೃಢೀಕೃತ ಪ್ರತಿಯನ್ನು ನಾನು ಒದಗಿಸಿದ್ದೇನೆ. ಸದರಿ ದಾಖಲೆಯನ್ನು **ನಿಪಿ.73** ಎಂದು ಸಾಕ್ಷಿಯ ಸಹಿಯನ್ನು **ನಿಪಿ.73 ಎ** ಎಂದು ಗುರುತಿಸಲಾಯಿತು.

9. ದಿಃ21.1.2015 ರಂದು ನನ್ನನ್ನು ಮತ್ತು ಪ್ರಥಮ ದರ್ಜೆ ಗುಮಾಸ್ತನನ್ನು ಲೋಕಾಯುಕ್ತ ಕಚೇರಿಗೆ ಕರಿಸಿದ್ದರು. ಅದರಂತೆ ನಾವು ಬೆಃ 11.00 ಗಂಟೆಗೆ ಲೋಕಾಯುಕ್ತ ಕಚೇರಿಗೆ ಹೋಗಿದ್ದು ಅಲ್ಲಿ ಚಾಸಾ-.2 ಯರಕಲ್ಲು ಸ್ವಾಮಿ , ದೇವದಾಸ ಚಾಸಾ-.4 , ದೂರುದಾರ ಲಿಂಗಪ್ಪ ರವರನ್ನು ನಮಗೆ ಪರಿಚಯಿಸಿದರು. ಫಿರ್ಯಾದಿದಾರರು , 1 ಮತ್ತು 2 ನೇ ಆರೋಪಿಯ ನಡುವೆ ಆದ ಸಂಭಾಷಣೆಯ ದೃಢೀಕರಣ ಮಾಡಲು ನಮ್ಮನ್ನು ಕರೆಸಿರುವುದಾಗಿ ತಿಳಿಸಿದರು. ಫಿರ್ಯಾದುದಾರರು, 1 ಮತ್ತು 2 ನೇ ಆರೋಪಿ ರವರ ನಡುವಿನ ಸಂಭಾಷಣೆಯ ಸಿಡಿಯನ್ನು ಲ್ಯಾಪಟಾಪ್ ನಲ್ಲಿ ಅಳವಡಿಸಿ ನಮಗೆ ಕೇಳಿಸಲಾಯಿತು. ನಾನು ಅವರ ಧ್ವನಿಯನ್ನು ಕೇಳಿಸಿಕೊಂಡು ಸದರಿ ಸಿಡಿಯಲ್ಲಿ ದಾಖಲಾದ ಧ್ವನಿಗಳು ಆರೋಪಿ 1 ಈಶ್ವರಯ್ಯ ಮತ್ತು

ಆರೋಪಿ 2 ಸುಮಲತ ರವರ ಧ್ವನಿ ಎಂದು ಗುರುತಿಸಿರುತ್ತೇನೆ. ಆ ಸಮಯದಲ್ಲಿ ಬರೆದ ಪಂಚನಾಮೆಯನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ.55 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.55(ಬಿ)** ಎಂದು ಗುರುತಿಸಲಾಯಿತು. ಸಿಡಿಯನ್ನು ಈಗಾಗಲೇ ನಿಪಿ.53 ಎಂದು ಗುರುತಿಸಲಾಗಿದೆ. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ಗುರುತಿಸುತ್ತೇನೆ.

10. ಖಾತಾ ಬದಲಾವಣೆ ಮಾಡಲು ಸರ್ಕಾರ ಆದೇಶದ ಪ್ರಕಾರ ರೂ.500/-ಶುಲ್ಕ ಇತ್ತು. ಆಸ್ತಿ ದೃಢೀಕರಣ ನೀಡಲು ರೂ.50/- ಶುಲ್ಕ ಇತ್ತು. ಆ ಬಗ್ಗೆ ನಾನು ದಾಖಲೆಯನ್ನು ಒದಗಿಸಿದ್ದೇನೆ. ನಾನು ಲೋಕಾಯುಕ್ತ ಇನ್ಸಪೆಕ್ಟರ್ ರವರ ಮುಂದೆ ಹೇಳಿಕೆ ನೀಡಿದ್ದೇನೆ.

## ಪಾಟೀ ಸವಾಲುಃ ಶ್ರೀ ಯುಬಿ ಆರ್ ವಕೀಲರು 1 ನೇ ಆರೋಪಿಯ ಪರಃ

**11.** ನನ್ನ ಕಾರ್ಯವ್ಯಾಪ್ತಿಯಲ್ಲಿ 40 ಗ್ರಾಮ ಪಂಚಾಯ್ತಿಗಳು ಇದ್ದವು. ದಾಳಿ ನಡೆಯು 2 ತಿಂಗಳ ಪೂರ್ವದಲ್ಲಿ 1 ನೇ ಆರೋಪಿ ಸದರಿ ಗ್ರಾಮ ಪಂಚಾಯ್ತಿಯ ಚಾರ್ಜ್ ತೆಗೆದುಕೊಂಡಿದ್ದನು. 1 ನೇ ಆರೋಪಿಯನ್ನು ನಾನು ಮೀಟಿಂಗ್ ನಲ್ಲಿ ಮಾತ್ರ ನೋಡಿದ್ದೇನೆ. ನನ್ನ ಎಲ್ಲ ಸಿಬ್ಬಂದಿಗಳ ಧ್ವನಿಯನ್ನು ನನಗೆ ಗುರುತಿಸಲು ಆಗುವುದಿಲ್ಲ.

12. ಟ್ರಾಪ್ ಆದ ದಿನ ನಾನು ಸದರಿ ಸ್ಥಳಕ್ಕೆ ಹೋದಾಗ ಬಹಳಷ್ಟು ಜನ ಸೇರಿದ್ದರು. ಲೋಕಾಯುಕ್ತ ಅಧಿಕಾರಿಯು ಆರೋಪಿಯನ್ನು ಹಣ ಎಲ್ಲಿ ಎಂದು ಕೇಳಿದಾಗ ಆತ ತನ್ನ ಜೇಬಿನಲ್ಲಿ ಇದೆ ಎಂದು ಹೇಳಿದನು ಎಂದು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದೇನೆ. ಆರೋಪಿಯ ಎಡ ಕೈ ಮತ್ತು ಬಲ ಕೈಯನ್ನು ದ್ರಾವಣದಲ್ಲಿ ಅದ್ದಿ ಸದರಿ ದ್ರಾವಣವನ್ನು 2 ಬಾಟಲಿಗಳಲ್ಲಿ ತೆಗೆದುಕೊಂಡಿರುತ್ತಾರೆ. ಎಂಒ 4 ಮತ್ತು 5 ದ್ರಾವಣವು

ಗುಲಾಬಿ ಬಣ್ಣದಲ್ಲಿ ಇಲ್ಲ ಎನ್ನುವುದು ಸರಿ . ದ್ರಾವಣ ತುಂಬಿದ ಬಾಟಲಿಗಳ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿಲ್ಲ. ನನ್ನ ಸಮಕ್ಷಮದಲ್ಲಿ ನಿಪಿ.45 ರಂತೆ ಪಂಚನಾಮೆ ಮಾಡಿಲ್ಲ ಎನ್ನುವುದು ಸರಿಯಲ್ಲ. ನನ್ನ ಸಮಕ್ಷಮದಲ್ಲಿ ನಿಪಿ.46 ರಿಂದ 51 ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ.

13. ದಿಃ21.1.2015 ರಂದು ನನ್ನನ್ನು ಮತ್ತು ಪ್ರಥಮ ದರ್ಜೆ ಗುಮಾಸ್ತನನ್ನು ಲೋಕಾಯುಕ್ತ ಕಚೇರಿಗೆ ಕರಿಸಿದ್ದರು, ಅದರಂತೆ ನಾವು ಬೆಃ 11.00 ಗಂಟೆಗೆ ಲೋಕಾಯುಕ್ತ ಕಚೇರಿಗೆ ಹೋಗಿದ್ದು ಅಲ್ಲಿ ಚಾಸಾ-.2 ಯರಕಲ್ಲು ಸ್ವಾಮಿ , ದೇವದಾಸ ಚಾಸಾ-.4 , ದೂರುದಾರ ಲಿಂಗಪ್ಪ ರವರನ್ನು ನಮಗೆ ಪರಿಚಯಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಫಿರ್ಯಾದಿದಾರರು , 1 ಮತ್ತು 2 ನೇ ಆರೋಪಿಯ ನಡುವೆ ಆದ ಸಂಭಾಷಣೆಯ ದೃಢೀಕರಣ ಮಾಡಲು ನಮ್ಮನ್ನು ಕರೆಸಿರುವುದಾಗಿ ತಿಳಿಸಿದರು, ಫಿರ್ಯಾದುದಾರರು, 1 ಮತ್ತು 2 ನೇ ಆರೋಪಿ ರವರ ನಡುವಿನ ಸಂಭಾಷಣೆಯ ಸಿಡಿಯನ್ನು ಲ್ಯಾಪಟಾಪ್ ನಲ್ಲಿ ಅಳವಡಿಸಿ ನಮಗೆ ಕೇಳಿಸಲಾಯಿತು, ನಾನು ಅವರ ಧ್ವನಿಯನ್ನು ಕೇಳಿಸಿಕೊಂಡು ಸದರಿ ಸಿಡಿಯಲ್ಲಿ ದಾಖಲಾದ ಧ್ವನಿಗಳು ಆರೋಪಿ 1 ಈಶ್ವರಯ್ಯ ಮತ್ತು ಆರೋಪಿ 2 ಸುಮಲತ ರವರ ಧ್ವನಿ ಎಂದು ಗುರುತಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

14. ಅಲಕುಂದಿ ಗ್ರಾಮ ಪಂಚಾಯ್ತಿಯಲ್ಲಿ ಆರೋಪಿಗಳು ಅಲ್ಲದೆ ಬೇರೆ ಸಿಬ್ಬಂದಿಗಳು ಕೆಲಸ ಮಾಡುತ್ತಾರೆ. ಸಿಡಿಯಲ್ಲಿ ದಾಖಲಾದ ಧ್ವನಿಯಲ್ಲಿ ಅಸ್ಪಷ್ಟತೆ ಇರುವುದರಿಂದ ನನಗೆ ಗುರುತಿಸಲು ಆಗುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ.53 ಸಿಡಿಯನ್ನು ಹಾಕಿದ ಕವರ್

ನ ಮೇಲೆ ನನ್ನ ಸಹಿ ಇರುವ ಚೀಟಿ ಇಲ್ಲ. ಲೋಕಾಯುಕ್ತ ಅಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಜೆ ಎಸ್ ಬಿಃ ವಕೀಲರು 2 ನೇ ಆರೋಪಿಯ ಪರಃ</u>**

**15.** ನಾನು ಆರೋಪಿ ಸುಮಲತಾ ರವರ ಧ್ವನಿಯನ್ನು ಗುರುತಿಸಿಲ್ಲ ಎನ್ನುವುದು ಸರಿಯಲ್ಲ. ದಾಳಿ ನಡೆದ ನಂತರ ನನ್ನನ್ನು ಪುನಃ ಲೋಕಾಯುಕ್ತ ಕಚೇರಿಗೆ ಕರೆದಿದ್ದರು. ಲೋಕಾಯುಕ್ತ ಕಚೇರಿಗೆ ನನ್ನನ್ನು ಕರೆದಿಲ್ಲ ಮತ್ತು ನಾನು ಧ್ವನಿಯನ್ನು ಗುರುತಿಸಿಲ್ಲ ಎನ್ನುವುದು ಸರಿಯಲ್ಲ.

**<u>ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

**<u>ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**